## ಕಳೆದ ಸಂಚಿಕೆಯಲ್ಲಿ



ಮಾನಸಿಕ ತಜ್ಞರನ್ನು ಹಿಂಜರಿಕೆಯಿಂದಲೇ ಭೇಟಿಯಾದರೂ ಡಾ. ರೂಪಾ ಅವರೊಂದಿಗಿನ ಮಾತುಕತೆ ಪ್ರದೀಪನಲ್ಲಿ ಆಶಾಭಾವ ಮೂಡಿಸಿತು. ನಿವೇದಿತಾಳ ನಡವಳಿಕೆಯ ಬಗ್ಗೆ ವೈದ್ಯರಿಗೆ ವಿವರವಾಗಿ ಮಾಹಿತಿ ನೀಡಿದ ಅವನು, ಹೆಣ್ಣುಮಗು ಹುಟ್ಟಿದಾಗ ನಿವೇದಿತಾಳಿಗೆ ಬೇಸರವಾದುದನ್ನೂ ತಿಳಿಸಿದ. ತನ್ನ ಪಾಲಿಗೆ ತನ್ನ ಪತ್ನಿ ಮುಚ್ಚಿದ ಪುಸ್ತಕವಾಗಿರುವ ಬಗ್ಗೆ ಹೇಳಿಕೊಂಡ. ಮಗಳನ್ನು ನೋಡಲು ಕೇಶವ–ವೀಣಾ ದಂಪತಿ ಪ್ರದೀಪನ ಮನೆಗೆ ಬಂದರು. ಅವರೊಂದಿಗೆ ಅರವಿಂದರ ಕುಟುಂಬವೂ ಆಗಮಿಸಿತು. ಅತಿಥಿಗಳ ಆಗಮನ ನಿವೇದಿತಾಳಿಗೆ ಇಷ್ಟವಾಗಲಿಲ್ಲ. ಮಗುವಿನೊಂದಿಗೆ ಟೆರೇಸ್‌ಗೆ ಹೋಗಿ ಬಾಗಿಲು ಹಾಕಿಕೊಂಡ ಅವಳು, ಬಂದವರು ಮನೆಯಿಂದ ಹೋಗುವವರೆಗೂ ಹೊರಗೆ ಬರಲೇ ಇಲ್ಲ. ಹೊರಗೆ ಬಂದ ನಿವೇದಿತಾ ಅತ್ತಿದ್ದನ್ನು ಪ್ರದೀಪ ಗಮನಿಸಿದ. 'ದಯವಿಟ್ಟು ನನ್ನನ್ನು ಎಲ್ಲಿಗೂ ಕಳಿಸಬೇಡಿ. ನಾನು ನಿಮ್ಮ ಬಳಿಯಲ್ಲಷ್ಟೇ ಸುರಕ್ಷಿತ ಭಾವ ಅನುಭವಿಸುವೆ' ಎಂದು ಪತ್ನಿ ಆತಂಕದ ದನಿಯಲ್ಲಿ ಹೇಳಿದಾಗ, ಅವಳ ಬಗ್ಗೆ ಪ್ರದೀಪನಿಗೆ ಸಹಾನುಭೂತಿ ಉಕ್ಕಿಬಂತು. ಪತ್ನಿಯ ನಡವಳಿಕೆ ಅವನ ಪಾಲಿಗೆ ಬಗೆಹರಿಯದ ಒಗಟಾಗಿಯೇ ಉಳಿದರೂ, ಅವಳ ಸಮಸ್ಯೆಯ ಸ್ವರೂಪ ಹೆಚ್ಚು ಹೆಚ್ಚು ನಿಚ್ಚಳವಾಗತೊಡಗಿತು.

---

ನಿಮಗೆ ಬಿಟ್ಟದ್ದು. ಆಕೆ ಒಪ್ಪಿಗೆ ನೀಡಿದ ನಂತರ ನನಗೆ ತಿಳಿಸಿ. ನಾನು ತಾರೀಕು ಹೇಳ್ತೀನಿ' ಎಂದಾಗ ಪ್ರದೀಪ ಇದನ್ನು ಪತ್ನಿಗೆ ತಿಳಿಸುವುದು ಹೇಗೆ, ಆಕೆಯನ್ನು ಒಪ್ಪಿಸುವುದು ಹೇಗೆಂಬುದೇ ಅವನಿಗೆ ದೊಡ್ಡ ಚಿಂತೆಯಾಯಿತು.

ಡಾ. ರೂಪಾ ಅವರ ಬಳಿಗೆ ಹೋಗಿ ಬಂದ ನಂತರ ನಿವೇದಿತಾ ತುಸು ಖಿನ್ನಳಾಗಿದ್ದಳು. ಮುಂಚಿಗಿಂತಲೂ ಮಾತು ಕಡಿಮೆಯಾಗಿತ್ತು. ಯಾವುದೋ ದೀರ್ಘ ಆಲೋಚನೆಯಲ್ಲಿ ಮುಳುಗಿರುವಂತೆ ಕಂಡುಬರುತ್ತಿದ್ದಳು. ಹಾಗಾಗಿ ಪ್ರದೀಪ ಈ ಸಮ್ಮೋಹನ ಚಿಕಿತ್ಸೆಯ ವಿಷಯ ಅವಳಿಗೆ ತಿಳಿಸಲು ಅಳುಕಿದ್ದ. ಅವಳ ಪ್ರತಿಕ್ರಿಯೆ ಹೇಗಿರಬಹುದೆಂಬ ಕಲ್ಪನೆಯೇ ಅವನಲ್ಲಿ ಅಂಜಿಕೆಯುಂಟು ಮಾಡಿತ್ತು.

ಆದರೂ ಹೆಚ್ಚು ದಿನ ವ್ಯಯಿಸುವಂತೆ ಇರಲಿಲ್ಲ. ಕಬ್ಬಿಣ ಕಾದಾಗಲೇ ಬಡಿಯಬೇಕಿತ್ತು. ಈ ದುರ್ಬಲ ಮನಸ್ಥಿತಿಯಲ್ಲಿ ಅವಳು ಹೆಚ್ಚು ಪರಿಣಾಮಕಾರಿಯಾಗಿ ಸ್ಪಂದಿಸಬಲ್ಲಳೆಂಬ ನಂಬಿಕೆ ಅವನಲ್ಲಿತ್ತು. ಅದಕ್ಕಿಂತಲೂ ಹೆಚ್ಚಾಗಿ ಡಾ. ರೂಪಾ ಅವರ ಮೇಲೆ ನಂಬಿಕೆ ಇತ್ತು. ನಿವಿ ಮಗುವಿಗೆ ಹಾಲುಣಿಸುತ್ತಾ ಕುಳಿತಾಗ ಪ್ರದೀಪ ಒಳಗೆ ಬಂದವನು ಆಕೆಯ ಪಕ್ಕ ಕುಳಿತ.

ಅವಳು ಹಾಲುಣಿಸುವಾಗ ಪ್ರದೀಪ ಮುಂದೆ ಕುಳಿತುಕೊಳ್ಳುವುದು ನಿವಿಗೆ ಮುಜುಗರವಾಗುತ್ತಿತ್ತು. ಎರಡು ಮೂರು ಬಾರಿ ಅವಳು ಸೂಕ್ಷ್ಮವಾಗಿ ತಿಳಿಸಿದ ನಂತರ ಅವನು ಆನಂತರ ಎದುರೇ ಬರುತ್ತಿರಲಿಲ್ಲ. ಇಂದು ಹಾಗೆ ಬಂದು ಕುಳಿತಾಗ ಅವಳು ಪ್ರಶ್ನಾರ್ಥಕವಾಗಿ ನೋಡುತ್ತ, 'ಏನು?' ಎಂದು ಕೇಳಿದಳು.

'ರೂಪಾ ಮೇಡಮ್ ನಮ್ಮಿಬ್ಬರಿಗೂ ಫೈನಲ್ ಆಗಿ ಒಂದು ಸೆಷನ್ ಇಟ್ಟಿದ್ದಾರೆ. ಅದಕ್ಕೆ ನಾವಿಬ್ಬರೂ ಸಹಕರಿಸಬೇಕಿದೆ. ಆದರೆ ನನಗೆ ಇಷ್ಟವಿಲ್ಲ. ನನಗೇನಾಗಿದೆಯೆಂದು ನಾನು ಒಪ್ಪಬೇಕು? ನೀನು ನನ್ನ ಅಲ್ಲಿಗೆ ಕರೆದೊಯ್ದು ಈಗ ನೋಡು, ನನ್ನಲ್ಲೇ ಸಮಸ್ಯೆ ಇದೆ ಅನ್ನುವ ಥರ ಅವರು ನನ್ನ ನೋಡ್ತಾರೆ' ಎಂದ ಆಕ್ಷೇಪಣೆಯ ದನಿಯಲ್ಲಿ.

'ಮತ್ತೆ ಸಮಸ್ಯೆ ನನ್ನಲ್ಲಿದೆಯೇ? ನೀವು ಸಹಕರಿಸಲೇ ಬೇಕಲ್ಲವೇ ಪ್ರದೀಪ್. ಹೇಗೂ ಕೊನೆಯ ಬಾರಿ ಎನ್ನುತ್ತಿದ್ದೀರಿ. ಹೋಗಿ ಬನ್ನಿ' ಎಂದಳು ಸರಾಗವಾಗಿ.

'ಮತ್ತೆ ನಿನಗೂ ಇದೆಯಂತಲ್ಲ. ನಿನ್ನಲ್ಲಿ ಸಮಸ್ಯೆ ಇಲ್ಲ. ಆದರೆ ನಿನ್ನ ಬಳಿಯೂ ಕೇಳಬೇಕಂತೆ. ನನ್ನ ಬಗ್ಗೆ ತಿಳಿಯಲು ನಿನ್ನನ್ನು ಈ ಸಮ್ಮೋಹನ ಚಿಕಿತ್ಸೆಗೆ ಒಳಪಡಿಸುತ್ತಾರಂತೆ' ಅವಳ ಪ್ರತಿಕ್ರಿಯೆ ಅರಿಯಲು ಅವಳ ಮುಖವನ್ನೇ ದೀರ್ಘವಾಗಿ ನಿರುಕಿಸುತ್ತಾ ನುಡಿದ.

ಅವಳ ಮುಖ ಒಮ್ಮೆಗೇ ವಿವರ್ಣವಾಯಿತು.

'ಸಮ್ಮೋಹನ ಚಿಕಿತ್ಸೆನಾ? ಅಂದರೆ ಹಿಪ್ನಾಟಿಸಂ?' ಪ್ರಶ್ನಾರ್ಥಕ ನೋಟ ಬೀರಿದಳು.

'ಹ್ಞೂಂ. ನೀನು ಹೇಳಿದ ಮೇಲೆ ಒಪ್ತೀನಿ ಬಿಡು. ಹೇಗೂ ನನ್ನ ಕಾರಣದಿಂದ ಸಮಸ್ಯೆ ಅಲ್ವಾ? ನಾನೇ ಸರಿಪಡಿಸಿಕೊಳ್ಳಬೇಕು. ಒಟ್ಟಿನಲ್ಲಿ ನಮ್ಮ ಸಂಸಾರ ಸರಿ ಹೋದರೆ ಸಾಕು. ನನಗೋಸ್ಕರ ನೀನೂ ಇದಕ್ಕೆ ಒಪ್ಪೀಯಲ್ವಾ?' ಅವನು ಮೃದುವಾಗಿ ಕೇಳಿದಾಗ ನಿವೇದಿತಾಳಿಗೆ ಇಲ್ಲವೆನ್ನಲಾಗಲಿಲ್ಲ. ಅವನ ಯೋಜನಾಬದ್ಧ ಮಾತಿನ ಇಕ್ಕಳದಲ್ಲಿ ಅವಳು ಸಿಲುಕಿ ಬಿದ್ದಿದ್ದಳು. ಬರೀ ಗೋಣಾಡಿಸಿ ಒಪ್ಪಿಗೆ ನೀಡಿದರೂ ಮುಖದಲ್ಲಿ ಸಣ್ಣ ಅಸಂತುಷ್ಟತೆ ಇತ್ತು.

'ಸರಿ. ನಿನಗೆ ಡೇಟ್ ಹೇಳ್ತೀನಿ. ಆಗ ನೀನು ಹೋದರಾಯಿತು. ನನ್ನ ತಾರೀಕಿಗೆ ನಾನು ಹೋಗ್ತೀನಿ' ಎಂದುಬಿಟ್ಟ.

'ನನಗೆ ಹಿಪ್ನಟೈಸ್ ಮಾಡುವಾಗ ಎದುರಿಗೆ ನೀವು ಇರುವುದಿಲ್ಲವಾ?' ನಿವೇದಿತಾ ಕುತೂಹಲದಿಂದ ವಿಚಾರಿಸಿದಳು.

'ಇಲ್ಲ. ಅಲ್ಲಿ ನೀನು ಮತ್ತು ಮೇಡಮ್ ಮಾತ್ರ. ನೀನು ತಿಳಿಸಿದ ಸಂಗತಿ ನನಗೂ ಅರಿವಾಗುವುದಿಲ್ಲ. ಆ ಭರವಸೆ ರೂಪಾ ಮೇಡಮ್ ನೀಡಿದ್ದಾರೆ' ಎಂದಾಗ ಅವಳು ಮತ್ತೆ ಪ್ರಶ್ನೆ ಕೇಳಲು ಹೋಗಲಿಲ್ಲ. ಅವಳ ಮೌನ ಕಂಡು ಅವಳ ಸಮ್ಮತಿ ಇದೆ ಎಂದು ಭಾವಿಸಿದ್ದು ಸುಳ್ಳಾಯಿತು. ಇದು ಅರಿವಾಗಿದ್ದು ಎರಡು ದಿನಗಳ ಬಳಿಕ.

ಮನೆಗೆ ಹಿಂತಿರುಗುವ ದಾರಿಯಲ್ಲಿದ್ದ ಅವನಿಗೆ ಪ್ರಭಾವತಿ ಕರೆ ಮಾಡಿ ತಿಳಿಸಿದ ಸಂಗತಿ ಕೇಳಿ ಹೌಹಾರಿದ್ದ. ಪದೀಪ ಮನೆಗೆ ದೌಡಾಯಿಸಿ ತಲುಪುವ ಹೊತ್ತಿಗೆ, ನಿವಿ ಹರಿತವಾದ ಚಾಕುವಿನಿಂದ ಅಂಗೈ ಕೆಳಗೆ ಕುಯ್ದುಕೊಂಡಿದ್ದಳು. ಪ್ರಭಾವತಿ ನೋಡದಿದ್ದರೆ ರಕ್ತ ದೊಡ್ಡ ಪ್ರಮಾಣದಲ್ಲಿ ಹರಿದು ಅಪಾಯದ ಅಂಚಿಗೆ ತಲುಪುತ್ತಿದ್ದಳು. ಆಕೆ ನರ್ಸ್ ಆಗಿದ್ದ ಕಾರಣ, ತ್ವರಿತವಾಗಿ ಪ್ರಥಮ ಚಿಕಿತ್ಸೆ ನೀಡಿ ಪ್ರದೀಪನಿಗೆ ಕರೆ ಮಾಡಿದ್ದಳು. ಆಗಲೇ ಮನೆಗೆ ಹೊರಟಿದ್ದ ಪ್ರದೀಪ ಅಷ್ಟೇ ವೇಗವಾಗಿ ಬಂದು ನಿವಿಯನ್ನು ಹತ್ತಿರದ ಆಸ್ಪತ್ರೆಗೆ ಕರೆದೊಯ್ದಿದ್ದ. ಸಮಸ್ಯೆ ಮಾನಸಿಕವಾಗಿ ಗಂಭೀರ ರೂಪದ್ದಾಗಿದ್ದರೆ, ಬಾಹ್ಯವಾಗಿ ಅದು ಆಳವಾಗಿದ್ದಿರಲಿಲ್ಲ. ನಿವೇದಿತಾಳಿಗೆ ತಾನೇನು ಮಾಡಿಕೊಂಡೆ ಎಂಬ ಅರಿವೇ ಇರದಂತೆ ಇದ್ದಳು. ಅವಳ ಕೈಯ ಗಾಯ ಕಂಡು ಅವಳೇ ಅಚ್ಚರಿಪಟ್ಟಿದ್ದಳು.

'ನನಗೆ ಇದು ಹೇಗಾಯಿತೆಂದೇ ಗೊತ್ತಿಲ್ಲ' ಅವಳು ಪೆಚ್ಚಾಗಿ ನುಡಿದಾಗ ಪ್ರದೀಪನಿಗೆ ಈ ಸಂಗತಿ ನಂಬಬೇಕೋ ಬಿಡಬೇಕೋ ತಿಳಿಯಲಿಲ್ಲ.

'ಗಾಯ ಸಣ್ಣದಾಗಿದ್ದರಿಂದ ಆಯಿತು ನಿವಿ. ಅರಿಯದೇ ದೊಡ್ಡ ಮಟ್ಟದಾಗಿದ್ದರೆ ನಾನೇನು ಮಾಡಬೇಕಿತ್ತು ಹೇಳು?' ಎಂದ ಬೇಸರದಿಂದ. ಅಲ್ಲೇ ಇದ್ದ ಪ್ರಭಾವತಿಯನ್ನು ತರಾಟೆಗೆ ತೆಗೆದುಕೊಂಡ. 'ಏನಕ್ಕಾ ನೀವು? ನಾನು ನಿಮ್ಮನ್ನು ನೇಮಕ ಮಾಡಿದ್ದೇ ನಿವಿಯ ಮೇಲೆ ಸದಾ ನಿಗಾ ಇಡಬೇಕೆಂಬ ಕಾರಣಕ್ಕೆ. ಹೀಗಾಗುವಾಗ ನೀವೆಲ್ಲಿದ್ದಿರಿ?'

'ಅಣ್ಣಾ, ಮೇಡಮ್ ನನ್ನನ್ನು ಹೊರಗೆ ಕಳಿಸಿದ್ರು. ನನಗೆ ಅವರ ಮಾತನ್ನು ವಿರೋಧಿಸಲಾಗಲಿಲ್ಲ. ಆದರೂ ಭಯದಲ್ಲಿ ನಾನು ಒಳಗೆ ನೋಡುತ್ತಲೇ ಇದ್ದೆ. ಕ್ಷಣ ಮಾತ್ರದಲ್ಲಿ ಹೀಗೆ ಗಾಯ ಮಾಡಿಕೊಂಡರು' ಎಂದಳು. ಅವಳ ಬಳಿ ಮಾತನಾಡಿ ಪ್ರಯೋಜನವಿಲ್ಲವೆನಿಸಿತು. ಅಲ್ಲಿಂದ ಹೊರ ಬಂದು ಡಾ. ರೂಪಾರಿಗೆ ಕರೆ ಮಾಡಿ ವಿಷಯವೆಲ್ಲಾ ವಿವರಿಸಿದ. ಅದನ್ನು ಆಲಿಸಿಕೊಂಡ ಡಾ. ರೂಪಾ ಒಂದು ಕ್ಷಣ ದಂಗಾದರು.

ನಿವೇದಿತಾ ತನಗೆ ತಾನೇ ಹಾನಿ ಮಾಡಿಕೊಂಡಿದ್ದಾಳೆ! ಸೆಲ್ಫ್ ಹಾರ್ಮ್!

ಇಂಥ ಕೇಸ್‌ನಲ್ಲಿ ಇದು ಕೂಡಾ ಜರಗುತ್ತದೆ ಎನ್ನುವುದು ಸಹಜ. ಆಕೆ ಸಮ್ಮೋಹನ ಚಿಕಿತ್ಸೆಗೆ ಬರಲು ಅವನ ಬಳಿ ಅರೆ ಮನಸ್ಸಿನಿಂದ ಒಪ್ಪಿದ್ದಳೇ? ಹಾಗಿದ್ದರೆ ಆಕೆಗೆ ಇದು ಇಷ್ಟವಿಲ್ಲ! ಅಂತರ್ಯದಲ್ಲಿದ್ದ ಸತ್ಯ ಎಲ್ಲಿ ಹೊರಗೆ ಬರುತ್ತದೋ ಎಂಬ ಭಯ. ಅದರಿಂದ ಆಗುವ ಪರಿಣಾಮಗಳಿಗೆ